For All Kinds of
Printing & Binding
The
Satyavadi
Press

Reg. No. M 1299) Daily & Weekly (Founded 1917

ಸತ್ಯವಾದಿ
SATYAVADI

ಸಂಪುಟ 26 ಸಂಚಿಕೆ 13 ಶನಿವಾರ 21—8—43 3 ಪೈ

ಅಕ್ಕರ
ಸ್ವಾಮಾಜಿಕ
ಭಾವಪರಿಪೂರ್ಣವಾದ ಕಥೆ
ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವ ತನಕ ಊಟಕ್ಕೆ ಕೂಡ ಏಳಲು ಮನಸ್ಸಾಗುವುದಿಲ್ಲ. ಬೆಲೆ 6 ಆಣೆ, ಪೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು.
ದೊರೆಯುವ ಸ್ಥಳ—
ಸತ್ಯವಾದಿ ಆಫೀಸ್, ಮೈಸೂರು

ಭಾರತಕ್ಕೆ ಜಪಾನೀಯರ ಭಯವಿಲ್ಲವೆ?

ಇಂಡಿಯಾ ಇಂದಿನ ವಾರ್ತೆ

ಆಹಾರ ಅಭಾವದಿಂದ ಅನಂತಶಯನದಲ್ಲಿ ಹಬ್ಬಗಳನ್ನು ಕಮ್ಮಿ ಮಾಡಲಾಗಿದೆ. ಮುಂದೆ ರಾಜರ ಹುಟ್ಟಿದ ಹಬ್ಬದಲ್ಲಿಯಾತನ್ನೂ ಊಟಕ್ಕೆ ಕರೆಯುವುದಿಲ್ಲ.

ಂ ಂ

ಮದರಾಸಿನಲ್ಲಿ 500 ಚಿಲ್ಲರೆ ಅಂಗಡಿಗಳನ್ನು ರೇಷನಿಂಗ್ ಕಾರ್ಡಿನವರಿಗೆ ಆಹಾರ ಪದಾರ್ಥಗಳನ್ನೊದಗಿಸಲು ಸರಕಾರದವರು ತೆರೆಯುವರಾಗಿರುವರು.

ಂ ಂ

ಕಲ್ಕತ್ತಾದಲ್ಲಿ ಇದೇ 25 ರಿಂದ ಅಕ್ಕಿ ಭತ್ತ ರೇಷನಿಂಗ್ ಜಾರಿಗೆ ಬರುವುದು. ಬಂಗಾಳಾದಿಂದ ಇವನ್ನು ಹೊರಗೆ ಎಲ್ಲೂ ರವಾನಿಸಕೂಡದು. ಏಕಪ್ರಕಾರವಾಗಿ ಧಾರಣೆ ಬಂಗಾಳಾದಲ್ಲೆಲ್ಲಾ ಜಾರಿಗೆ ಬರುವುದು.

ಂ ಂ

ಕಲ್ಲೀಕೋಟೆಯಲ್ಲಿ ರೈಲ್ವೆ ಪೋಲೀಸಿನವರಿಗೂ ಮಲಬಾರ್ ಸ್ಪೆಷಲ್ ಪೋಲೀಸಿನವರಿಗೂ ಗುದ್ದಾಟವಾಯಿತು.

ಂ ಂ

ಗಾಂಧೀಜಿ ಅವರಲ್ಲಿ ನಮಗೆ ಪೂರ್ತಾ ನಂಬಿಕೆಯಿದೆಯೆಂದು ನಾಗಪುರದ ಕಾಂಗ್ರೆಸ್ಸಿನವರು ಠರಾವುಮಾಡಿದ್ದಾರೆ.

ಂ ಂ

ಕೆಲವು ವೃತ್ತಪತ್ರಿಕೆಗಳಲ್ಲಿ ಗಾಂಧೀಜಿಯವರೂ ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ಒಟ್ಟಾಗಿ ಮಾತುಕತೆ ನಡೆಸುತ್ತಿರುವರೆಂದು ಬರೆದಿರುವದು ನಿಜವಲ್ಲವೆಂದು ಸರ್ ರಾಮಸ್ವಾಮಿ ಮೊದಲಿಯಾರರು ಬೆಜವಾಡಾದಲ್ಲಿ ಹೇಳಿದರು.

ಸಿಸಲಿಯುದ್ಧ ಮುಗಿದಿರುವುದರಿಂದ ಚಕ್ರವರ್ತಿಗಳು ತಮ್ಮ ಸಂತೋಷವನ್ನು ಚರ್ಚಿಲ್ಲರಿಗೆ ತಂತೀ ಕಳಿಸಿರುವರು.

ಂ ಂ

ಜಪಾನಿನ ಮೇಲೆಬ್ರೆಜಿಲ್ ಸೇನೆಗಳು ಯುದ್ಧ ಮಾಡಲು ಬರುವವು.

ಂ ಂ

ಇಟಲಿಯ ಪಾದದಲ್ಲಿರುವ ರೆಗ್ಗಿಯೋ ಪಟ್ಟಣವನ್ನು ಆಕ್ಸಿಸ್ ಸೇನೆಗಳು ಖಾಲಿ ಮಾಡಿದವು.

ಂ ಂ

ಒರ್ಲಿನ್ನಿನಿಂದ ಜರ್ಮನ್ ರಾಜಧಾನಿಯಲ್ಲೋ ಒಂದು ಕಡೆಗೆ ಬದಲಾಯಿಸಲ್ಪಟ್ಟಿದೆ.

ಂ ಂ

ಪೆಸಿಫಿಕ್ಕಿನ ಹವಾಯಿಸಲಿ ಜಪಾನೀಯರ ಕೈ ಬಹಳ ಮಟ್ಟಿಗೆ ಕುಗ್ಗಿದೆ

ಂ ಂ

ಹಂಗೇರಿ ಯುದ್ಧಮಂತ್ರಿಯು ಹಿಟ್ಲರನ್ನು ನೋಡಲು ಜರ್ಮನಿಗೆ ಬಂದರುವನು.

ಂ ಂ

ಫ್ರೆಂಚು ದೇಶಭಕ್ತರು ಫ್ರಾನ್ಸಿನಲ್ಲಿ ಒಂದು ರೈಲನ್ನು ಉರುಳಿಸಿದರು. ಇದರಿಂದ 200 ಜರ್ಮನಿಯವರು ಸತ್ತರು, 300 ಮಂದಿ ಗಾಯಗೊಂಡರು.

ಂ ಂ

ನಿನ್ನೆ ರಾತ್ರೆ ಶ್ರೀ ಆಣೆಯವಂ ಮದರಾಸಿನಿಂದ ಸಿಂಹಳ ದ್ವೀಪಕ್ಕೆ ತೆರಳಿದರು.

ಜಪಾನಿಗೆ ಭಯವಿಲ್ಲವೇ?

ಜಪಾನೀಯರು ಭಾರತವನ್ನು ಮುಟ್ಟಲು ಸ್ವಾಕಾದಷ್ಟು ಸೈನ್ಯವಿಲ್ಲವೆಂದು ಅಮೇರಿಕಾದ ಪ್ರಸಿದ್ಧ ವೃತ್ತಪತ್ರಿಕಾ ಕಾರ ಮಿ || ಎಡ್‌ಗರ್ ಸ್ನೋರವರು ದೆಹಲಿಯಿಂದ ಮಾಂಟೋಲಿಗೆ ತಂತಿ ಕೊಟ್ಟಿದ್ದಾರೆ.

ಂ ಂ

ಮಿ। ರೂಸ್ವೆಲ್ಟರ ಸಂತೋಷ

ಮಿ || ರೂಸ್ವೆಲ್ಟರು ಜನರಲ್ ಐಸಕ್ ಹೋವರ್‌ರವರಿಗೆ ಸಿಸಲಿ ಕದನ ಜಯ ಪ್ರದವಾದುದಕ್ಕೆ ತಮ್ಮ ಸಂತೋಷವನ್ನು ತಿಳಿಸಿರುತ್ತಾರೆ.

ಂ ಂ

ಮೈಸರಾಯರ ಆಗಮನ

ವೈಸರಾಯರು ತಮ್ಮ ಪತ್ನಿ ವೃತ್ತಿಯ ರೊಡಗೂಡಿ ನಿನ್ನೆ ಬೆಳಿಗ್ಗೆ ಬೆಂಗಳೂರಿಗೆ ಬಂದು ಅಲ್ಲಿಯ ಭಾರಿ ಕಾರ್ಖಾನೆಗಳು ಡೈರಿಫಾರಂ ಮುಂತಾದುವಕ್ಕೆ ಭೇಟಿ ಕೊಟ್ಟು, ಮೈಸೂರಿಗೆ 4 ಗಂಟೆಗೆ ಬಂದರು. ಇಲ್ಲಿ ಇವರುಗಳು ಸಿಲ್ಕ್ ಕಾರ್ಖಾನೆ, ಸಾನಿಟೋರಿಯಂ, ಮುಂತಾದುವಕ್ಕೆ ಭೇಟಿ ಕೊಟ್ಟರು. ಇವರು ಆಗಮನಾರ್ಥವಾಗಿ ಅರಮನೆಯ ದೀಪೋತ್ಸವವು ನಡೆಯಿತು. ಈ ದಿವಸ ಕೆಡ್ಡಾಕ್ಕೆ ಹೋಗಿಬರುವರೆಂದು ಗೊತ್ತಾಗಿದೆ.

ಮುಸ್ಲಿಮರು ಒಂದು ಜನಾಂಗವಲ್ಲ.
—ಸಾವರ್‌ಕರ್

ಜರ್ಮನ್ ರಾಜಧಾನಿ ಬರ್ಲಿನ್ನಲ್ಲವೆ?
—ರಾಯಟರ್

ಭಾರತವನ್ನು ಮುತ್ತಲು ಜಪಾನಿಯರಿಗೆ ಸಾಕಾದಷ್ಟು ಸೇನೆಯಿಲ್ಲ.
ಇ. ಸೋ

ಅನಂತಶಯನದಲ್ಲಿ ಹಬ್ಬಗಳನ್ನು ಕಮ್ಮಿ ಮಾಡಲಾಗಿದೆ.
—ಶತ್ಯಾಲಿ

ಕಲ್ಕತ್ತಾದಲ್ಲಿ ಮೊನ್ನೆ ರಾತ್ರಿ 182 ಮಂದಿ ಆಸ್ಪತ್ರೆಗೆ ಸೇರಲ್ಪಟ್ಟರು ಹಾದಿಯಲ್ಲೇ ನಾಲ್ವರ ಮರಣ

ಪೋಲೀಸಿನವರು ಒಬ್ಬರಿಗೊಬ್ಬರು ಗುದ್ದಾಡಿದರು.
ಕಲ್ಲೀಕೋಟೆ

ಮೈಸೂರು ಸಿಟಿ ಟ್ರಸ್ಟ್ ಬೋರ್ಡ್ ವಿಸ್ತಾರಗು 25 ನೇ ತಾರೀಖು ಸಾಯಂಕಾಲ 4.30ಕ್ಕೆ ನಡೆಯುವದು.

ಮೈಸೂರು ವಿಶ್ವಮಂಡಲಿಯವರು ಸಾಹಿತ್ಯೋತ್ಸವವನ್ನು 22 ನೇ ತಾರೀಖು ಬನುಮಯ್ಯ ಹೈ ಸ್ಕೂಲಿನಲ್ಲಿ ಡಾ|| ಕೃಷ್ಣರವರ ಅಧ್ಯಕ್ಷತೆಯಲ್ಲಿ ನೆರವೇರಿಸುವರು.

ಮೈಸೂರು ವೈಶ್ಯಪತ್ರಿಕೆಯ 3 ನೇ ಜನ್ಮೋತ್ಸವವು 22 ನೇ ತಾರೀಖು ಸಾಯಂಕಾಲ ಶ್ರೀ ವಾಸವಾಂಬಾ ಕಟ್ಟಡದಲ್ಲಿ ರಾಜಸೇವಾಸಕ್ತ ಪಾವುಡಿ ಸುಬ್ಬರಾಮ ಶೆಟ್ಟರ ಅಧ್ಯಕ್ಷತೆಯಲ್ಲಿ ನಡೆಯುವುದು.

Opera — — CHIRAG
ಅಪೇರಾ ಚಿರಾಗ್
ಈಶ್ವರಲಾಲ್, ಕೌಸಲ್ಯ, ವೀಣಕುಮಾರಿ, ಮುಜ್ಜಿದ್, ಮತ್ತು ಗೋಪಿಯವರಭಿನಯ
— ಮನೋಹರ ಹಿಂದೀ ಚಿತ್ರ —

ವಿದೇಶ

ಮುಂದಿನ ಮಂಗಳವಾರಕ್ಕೆ ಕ್ಯೂಬಿಕ್ಕಿನ ಕೂಟವು ಮುಕ್ತಾಯವಾಗುವದು.

o o

ಫಿನ್‌ಲೆಂಡಿನ ಕಡೆ ಜರ್ಮನರ ಬಲ ತಗ್ಗಿ, ಈಗ ರಷ್ಯನರ ಹೊಡೆತ ತಡೆದು ಕೊಂಡರೆ ಸಾಕಾಗಿದೆ.

o o

ರಷ್ಯಾದ ಕಾರ್‌ಕಾವ್ ಬಳಿ ಟ್ಯಾಂಕುಗಳ ಕದನ ಭೀಕರವಾಗಿ ನಡೆಯುತ್ತಿರುವದು.

o o

ಜನರಲ್ ಜೀರೋ ಮೊಲ್ಲಾಟ್ಟೆಕ್ಕೆ ಬಂದು ಗೌರ್ನರರ ಅತಿಥಿಯಾಗಿರುವರು.

o o

ಅಮೇರಿಕಾದ ವಿದೇಶಾಂಗ ಮಂತ್ರಿ ಕಾರ್ಡೆಲ್ ಹಲ್‌ರವರು ಕ್ಯೂಬೆಕ್ಕಿಗೆ ಒಂದಿರುತ್ತಾರೆ.

o o

ಅನೇಕ ಚೈನಾ ನೋಟುಗಳು ದಕ್ಷಿಣ ಆಫ್ರಿಕಾದ ರೇವುಗಳಲ್ಲಿ ತೇಲಿಕೊಂಡು ಬಂದಿರುತ್ತವೆ.

o o

ಕ್ಯೂಬೆಕ್ಕಿನಲ್ಲಿನ ಕಾರ್ಯಕಲಾಪಗಳು ಮುಗಿದಕೂಡಲೇ ಒಂದು ಮಿಲಿಟರಿ ಮಿಷ್ ಮಾಸ್ಕೋವಿಗೆ ಹೊರಡುವದು.

o o

ಅಮೇರಿಕಾದಲ್ಲಿ ಖೈದಿಗಳು ಯುದ್ಧ ಸಹಾಯಾರ್ಥವಾಗಿ ತಮ್ಮ ಒಂದು ಹೊತ್ತು ಊಟ ಬಿಟ್ಟು ಅದರ ಉಳತಾಯವನ್ನು ಯುದ್ಧಕ್ಕಾಗಿ ಉಪಯೋಗಿಸಬೇಕೆಂದು ಅಧಿಕಾರಿಗಳನ್ನು ಕೇಳಿಕೊಂಡರು. ಅಲ್ಲದೆ ಪ್ರತಿ ದಿನ ರಾತ್ರೆ 3 ಗಂಟೆ ಹೆಚ್ಚು ಕೆಲಸ ಮಾಡುತ್ತಿರುವರು.

o o

ಪೆಸಿಫಿಕ್ ರಂಗದಲ್ಲಿ ಅನೇಕ ಮಂದಿ ಅಮೇರಿಕಾ ಯೂನಿವರ್ಸಿಟಿವಿದ್ಯಾರ್ಥಿಗಳು ಯುದ್ಧಕ್ಕಾಗಿ ಸೇರಿರುವುದರಿಂದ ಅವರ ಯೂನಿವರ್ಸಿಟಿ ವಿದ್ಯಾಭ್ಯಾಸಕ್ಕೆ ತೊಂದರೆಯಾಗಬಾರದೆಂದು ಯುದ್ಧ ಜರುಗದ ವೇಳೆಯಲ್ಲಿ ಯೂನಿವರ್ಸಿಟಿ ತರಗತಿಯನ್ನು ಏರ್ಪಡಿಸಿ ಆ ಯುವಕರಿಗೆ ಯೂನಿವರ್ಸಿಟಿ ವಿದ್ಯಾಭ್ಯಾಸ ಮುಂದುವರಿಸುವ ಏರ್ಪಾಟು ಮಾಡಿದೆ.

o o

ಬರ್ಲಿನ್ನಿನಲ್ಲಿ ಕೆಲವು ಮಂದಿ ಪುಖ್ಯಾಧಿಕಾರಿಗಳು ರಷ್ಯಾಕ್ಕೆ ಮಿಲಿಟರಿ ಮಾಹಿತಿಯನ್ನು ಕಳಿಸಿಕೊಟ್ಟರೆಂಬ್ದ ಆಪಾದನೆಯಲ್ಲಿ ಅವರಿಗೆ ಮರಣಾಂತ್ಯ ಶಿಕ್ಷೆಯನ್ನು ವಿಧಿಸಿದರು.

ಮೆಸ್ಸಿನಿಯಾ

ಮೆಸ್ಸಿನಿಯಾ ಪಟ್ಟಣವು ಸಿಸಲಿಯ ಮುಖ್ಯ ಕೇಂದ್ರವೆನ್ನಬಹುದು. ಇದು 1904 ರವರೆಗೆ ಮನೋಹರವಾದ, ಐಶ್ವರ್ಯದಿಂದ ಕೂಡಿದ, ಪಟ್ಟಣವಾಗಿತ್ತು. ಆಗ ಭೂಕಂಪವಾಗಿ ಅಲ್ಲಿದ್ದ ಮನೆಗಳೆಲ್ಲಾ ನೆಲಸಮವಾದವು. 12 ನೇ ಶತಮಾನದಿಂದಿದ್ದ ಗುಡಿಗಳೂ ದೇವಾಲಯಗಳೂ ಎಲ್ಲಾ ನಾಶವಾದವು. ನಗರವನ್ನು ಮತ್ತೆ 1910 ರಲ್ಲಿ ಪುನರ್ ರಚನೆಮಾಡಿ ಕಟ್ಟಿದರು. 1924 ರಲ್ಲಿ ವಿಶ್ವವಿದ್ಯಾನಿಲಯ ಪ್ರಾರಂಭವಾಯಿತು. ಸುಂದರವಾದ ಮುನಿಸಿಪಲ್ ಕಛೇರಿ ಸಹಾ ಕಟ್ಟಿರುತ್ತಾರೆ ಭೂಕಂಪದಿಂದ ಲೈಬ್ರೆರಿ ನಾಶವಾಗಲಿಲ್ಲ. ಇಲ್ಲಿ ವ್ಯಾಪಾರ ಹೆಚ್ಚಾಗಿ ನಡೆಯುವುದು. ಮೆಸ್ಸಿನಾ ಜಲಸಂಧಿ ಇಟಲಿಗೂ ಸಿಸಲಿಗೂ ಮಧ್ಯೆ ಇದೆ. ಅಗಲ 15 ಮೈಲಿ. ಇಲ್ಲಿ ನೌಕೆಯನ್ನು ನಡೆಸುವದು ಕಷ್ಟ, ಸಮುದ್ರದ ಆಳ ಹೆಚ್ಚು.

ಸೆಳೆತ ವಿಪರೀತ.

ಎಂಡಲ್ ವಿಲ್ಕಿ

ಚಿತ್ರಗಳಲ್ಲಿ ಕಾಣಬರುವ ವಿಲ್ಕಿಗೂ, ಸಿಜವಾದ ವಿಲ್ಕಿಗೂ ಬಹಳ ವೈತ್ಯಾಸವಿದೆ. ಆತನು ದೃಢಕಾಯನು, ಉಕ್ಕಿನಂಥ ಶರೀರ. ಕರಡಿಗಿರುವಷ್ಟು ಆರೋಗ್ಯ, ಜ್ಯೋತಿಗಳಂಥಾ ನಯನಗಳು, ಆಯಾಸವೆಂಬುದನ್ನು ಆತನು ಅರಿಯನು, ಆತನನ್ನು ಯಾರೂ ಮೋಸಗೊಳಿಸಲಾರರು, ಬಾಯಿ ಮುಚ್ಚುವಂತೆ ಮಾಡಲಾರರು, ತಮ್ಮ ಆಧೀನ ಪಡಿಸಿಕೊಳ್ಳಲಾರರು ಆತನು ಎಂದೂ ಗಡಿಯಾರವನ್ನು ನೋಡಿದಂತೆಯೇ ಕಾಣಬರುವುದಿಲ್ಲ. ಆತನು ಸಾಧಾರಣವಾಗಿ ಗಡಿಯಾರವನ್ನು ತನ್ನಲ್ಲಿಟ್ಟುಕೊಂಡಿರುವುದಿಲ್ಲ. (ರೆಜಿಕ್ಕಾವೆಸ್ಟ್)

ಜಪಾನರ ದೌರ್ಜನ್ಯ

ಜಪಾನೀಯರು ಫಿಲಿಪ್ಪೀಸಿಯ ಆಕ್ರಮಣ ಮಾಡಿದಾಗ ಅವರು ಸಹಾ ಚೀನೀ ಪ್ರಜೆಗಳನ್ನು ಸಾಮೂಹಿಕವಾಗಿ ಕೊಲ್ಲಲಾರಂಭಿಸಿದರು.

ಫಿಲಿಪ್ಪೀಂಕ್ ಎಂಬ ಒಂದು ಊರಿನಲ್ಲಿಯೇ ಜಪಾನಿಯರು 520 ಮಂದಿ ಚೀನೀಯರನ್ನು ಕೊಂದುಹಾಕಿದರು. ಮತ್ತೆ 850 ಜನರನ್ನು ಜಪಾನೀ ಸೈನಿಕ ಪ್ರಧಾನ ಕಛೇರಿಗೆ ಎಳೆದುಕೊಂಡುಹೋದರು. ಆದರೆ ಅನಂತರ ಆ ರೀತಿ ಎಳೆದುಕೊಂಡು ಹೋದವರ ಪಾಡು ಏನಾಯಿತೆಂಬುದು ತಿಳಿದುಬರಲಿಲ್ಲ. (ಚೀನೀ ಸೈನ್ಯಾಧಿಪತಿ ಕಛೇರಿಯ ಪ್ರಕಟಣೆಯಿಂದ ಉದ್ಧರಿಸಲ್ಪಟ್ಟದ್ದು)

CHANGE OF ADDRESS

The Medicine & General Agencies

Stockists: Pharmaceutical Laboratories of India, Ltd, Calcutta

Shifted Their Show - Rooms

.... FROM ..

91 Lansdowne Bazaar. Mysore

.... TO ....

184 Old Mysore Bank Road, Mysore

ಶ್ರೀ ಪಿಕ್ಚರ್ಸ್ ರವರ

ವಾಣಿ

ಶೀಘ್ರದಲ್ಲಿಯೇ ಬರುವುದು

3 ನೇ ವಾರ

ರಣಜಿತ್ ಟಾಕೀಸ್

ಮೈಸೂರು

— ಸಿಕ್ಕೋ ತಯಾರಿಕೆ —

ನವಯುವಿಯ

(ಹಿಂದಿ)

ಅಜಾದ್ ಮಜರ್ ಶೋಭನ ಬೈರಾಜ್ ಮುಂತಾದವರ ಅಭಿನಯ

ಪ್ರತಿ ದಿನ 3 ಆಟಗಳು

For good printing

Lakshminarasimha Press

Artistic & Colour Printing a speciality

Srirampet, Mysore.

Edited, Printed & published by M. S. Krishna Rao, at the Satyavadi Press. Chamaraja Agrahar, Mysore.

ಪೂತ್ ಭೂಮಿಗೆ ಚಂದಾದಾರರಾಗಿ

ಮೈಸೂರು ಏಜೆಂಟ್—ಚಂದ್ರಶೇಖರ